JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಮಾಸ್ತಿಯವರ ಆಯ್ದ ಕಥೆಗಳ ಆಶಯ ಮತ್ತು ವಿಶ್ಲೇಷಣೆ

ಡಾ.ಚಿತ್ರಯ್ಯ ಕೆ.
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ)
ಚಿತ್ರದುರ್ಗ-577501
email id - Chisvr7clk@gmail.com

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಣ್ಣಕಥಾ ಪ್ರಕಾರಕ್ಕೆ ವಿಶಿಷ್ಟ ಪರಂಪರೆ ಇದೆ. ಚಾರಿತ್ರಿಕ ಸಾಂಸ್ಕೃತಿಕ ಒತ್ತಡ ಹಾಗೂ ಸಂಘರ್ಷದ ನಡುವೆ ಸೃಷ್ಟಿಯಾದ ಆಧುನಿಕ ಕಥಾ ಸಾಹಿತ್ಯ ಸ್ವಾತಂತ್ರ್ಯದ ಪೂರ್ವಘಟ್ಟದ ನಾಲ್ಕು ದಶಕಗಳಲ್ಲಿ ಮಾನವ ಜೀವಪರ ಮತ್ತು ಸಾಮಾಜಿಕ ಸಂಬಂಧದ ಸ್ವಭಾವದ ಮಜಲುಗಳ ಹುಡುಕಾಟ ನಡೆಯುತ್ತಲೆ ಬರುತ್ತಲಿದೆ. ದೇಶದ ಸ್ವಾತಂತ್ರ್ಯದ ಸ್ಥಾನದಲ್ಲಿ ಮಾನವತೆ, ಸಮಾನತೆಯ ಪರಿಕಲ್ಪನೆಯನ್ನು ಈ ಕಥಾ ಸಾಹಿತ್ಯ ಪ್ರತಿಪಾದಿಸುತ್ತಾ ಬಂದಿದೆ. 20ನೆ ಶತಮಾನದಲ್ಲಿ ಆರಂಭಗೊಂಡ ಈ ಕಥಾ ಸಾಹಿತ್ಯ ಇಂದು ಸಮೃದ್ಧವಾಗಿ ಬೆಳೆದು ಬಂದಿದೆ. ಕನ್ನಡದ ಗದ್ಯದ ಬಳಕೆಗೆ ಸುದೀರ್ಘ ಪರಂಪರೆ ಇದೆ. ಕಥೆಯ ವಿವರಣೆಗೆ, ವರ್ಣನೆ ಮತ್ತು ನಿರೂಪಣೆಗೆ ಗದ್ಯ ಅನಿವಾರ್ಯವಾಗಿದ್ದು ಅದು ಪ್ರಧಾನವಾಗಿಯೂ ಬಳಕೆಯಾಗಿದೆ. ಹೀಗಾಗಿ ಆರಂಭದಲ್ಲಿ ಸೃಷ್ಟಿಯಾದ ಕಥಾ ಸಾಹಿತ್ಯ ಆಯಾಯ ಪ್ರಾದೇಶಿಕ ಭಾಷಾ ಪ್ರಭೇದದಲ್ಲಿ ಕಾಣಿಸಿಕೊಂಡವು. ನವೋದಯ ಸಾಹಿತ್ಯದಲ್ಲಿ ಪ್ರಕಟವಾದ ಉತ್ಕಟ ಮಾದರಿಯ ಮತ್ತಷ್ಟು ವಿಸ್ತರಿಸಿಕೊಂಡದ್ದು ಪ್ರಗತಿಶೀಲ ಸಾಹಿತ್ಯದ ಪ್ರಮುಖ ಅಂಶವಾಗಿದೆ. ಇಲ್ಲಿ ಮುಖ್ಯವಾಗಿ ಲೇಖಕ ಮತ್ತು ಓದುಗರ ನಡುವಿನ ವಸ್ತರಿಸಿದ್ದು ಪ್ರಗತಿಶೀಲ ಮತ್ತು ದಲಿತ– ಬಂಡಾಯ ಸಾಹಿತ್ಯದ ಹೆಚ್ಚುಗಾರಿಕೆ ಎನ್ನಬಹುದು. ಸಮಾಜವಾದಿ ವಾಸ್ತವತೆ, ಸಮಾಕಾಲೀನ ವಿದ್ಯಮಾನಗಳ ಒತ್ತಡಗಳನ್ನು ಸೃಜನಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು. ಎಲ್ಲಾ ಕಾಲದ ಮೌಲಿಕ ಅಂಶಗಳು ಕತೆಗಳಲ್ಲಿ ಕಂಡು ಬರುತ್ತವೆ.

ಕ್ರಿ.ಶ.1900 ರ ಆರಂಭದಲ್ಲಿ ಪ್ರಕಟವಾದ ಪಂಜೆ ಮಂಗೇಶರಾಯರ ನನ್ನ ಚಿಕ್ಕಪ್ಪ ಕಥೆ ಇದು ಆ ಕಾಲದ ಮೊದಲ ಕಥೆ. ಪಂಜೆಯವರ ಕಥೆಗಳು ನವೋದಯ ಸಾಹಿತ್ಯದ ಆರಂಭಿಕ ರಚನೆಗಳಾಗಿವೆ. ಕಥಾ ರಚನೆಗಳಲ್ಲಿ ಚಾರಿತ್ರಿಕ – ಸಾಮಾಜಿಕ ವಸ್ತುಗಳನ್ನು ಬಳಸಿಕೊಂಡು ಆ ಕಾಲಕ್ಕೆ ಕಥೆಗಳ ಮೂಲಕ ಮಂಗಳೂರು ಪ್ರಾತ್ಯದ ಕಡೆಗೆ ಹೊಸ ಪ್ರಯೋಗ ನಡೆಸಿದ ಮೊದಲ ಲೇಖಕರು ಎನ್ನಬಹುದು. ತದ ನಂತರ ಉತ್ತರ ಕರ್ನಾಟಕದಲ್ಲಿ ಕೆರೂರು ವಾಸುದೇವಾಚಾರ್ಯರು ಸಣ್ಣ ಕಥೆಗಳ ರಚನೆಯಲ್ಲಿ ತೊಡಗಿಸಿಕೊಂಡರು. ಕಥೆಗಳಲ್ಲಿ ಉತ್ತರ ಕರ್ನಾಟಕದ ಪ್ರಾದೇಶಿಕ ಭಾಷೆ, ಶೈಲಿ ಹಾಗೂ ತಂತ್ರವನ್ನು ಬಳಸಿದರು. ಕಥೆಗಳಲ್ಲಿ ಕಾಲ್ಪನಿಕವಾದ, ಐತಿಹಾಸಿಕವಾದ ಮತ್ತು ಸಾಮಾಜಿಕ ವಸ್ತು ವಿಶೇಷತೆಯನ್ನು ಕಟ್ಟಿಕೊಟ್ಟರು. ವಾಸುದೇವಾಚಾರ್ಯರ ಕಥೆ ಮಲ್ಲೇಶಿಯ ನಲ್ಲೆಯರು. ಇದೇ ಭಾಗದ ಆನಂದ ಕಂದರ ವರು ಹಳ್ಳಿಯ ಬದುಕಿನ ವಿವಿಧ

ನಂಬಿಕೆ, ಆಚರಣೆ, ಐತಿಹ್ಯ, ತ್ಯಾಗ, ಬಲಿದಾನ, ವೀರಜೀವನ ಮುಂತಾದ ಸ್ಥಳೀಯ ಸಾಮಗ್ರಿಗಳನ್ನು ತಮ್ಮ ಕಥೆಗಳಿಗೆ ವಸ್ತುವನ್ನಾಗಿ ಸ್ವೀಕರಿಸಿದರು. ದಕ್ಷಿಣ ಕನ್ನಡದ ಶಿವಕಾರಂತರ ಚೋಮನದುಡಿ. ಗಲ್ಗಾಡಿ ವೆಂಕಟರಾಯರು, ಎಂ.ಎಸ್.ಪುಟ್ಟಣ್ಣನವರು ತಮ್ಮ ತಮ್ಮ ಕೃತಿಗಳಲ್ಲಿ ಬಳಸಿದ ಗದ್ಯದ ಭಾಷೆಯೇ ಮುಂದೆ ಆಧುನಿಕ ಕನ್ನಡದ ಕಥೆಗಾರರಿಗೆ ಒಂದು ಮಾದರಿಯಾಯಿತು. ಮೈಸೂರ ಪ್ರಾಂತ್ಯದಲ್ಲಿ ಮಾಸ್ತಿ, ಕುವೆಂಪು ಮೊದಲಾದ ಲೇಖಕರು ಕನ್ನಡ ಭಾಷೆಗೆ ಪಾತ್ರಗಳ ಸಂಭಾಷಣೆಯ ಭಾಷೆ ಹಾಗೂ ಸನ್ನಿವೇಶ ನಿರ್ಮಾಣದ ಎಚ್ಚರದ ಚೌಕಟ್ಟನ್ನು ಮೀರಿ ಆಧುನಿಕ ಶೈಲಿಯ ಕಥಾ ಸಾಹಿತ್ಯ ನಿರ್ಮಿಸಿದರು.

ಮಾಸ್ತಿಯವರು ಭಾರತೀಯ ಕಥಾ ಪರಂಪರೆಯ ಶಿಷ್ಟ ಹಾಗೂ ಜಾನಪದ ಎರಡರಿಮದಲೂ ಗಾಢವಾಗಿ ಪ್ರಭಾವಿತರಾಗಿದ್ದರು. ಇದರಿಂದಾಗಿಯೇ ಅವರ ಒಲವು ಮೌಖಿಕ ಪ್ರಕಾರಗಳತ್ತ ಹರಿಯಿತು. ಅವರು ಕತೆ ಕಟ್ಟಲಿಲ್ಲವೆಂದಲ್ಲ. ಆದರೆ ಕತೆ ಹೇಳುವುದರಲ್ಲಿಯೇ ಅವರಿಗೆ ನಿಜವಾದ ಆಸಕ್ತಿ ಇತ್ತು. ಪುರಾಣ, ಇತಿಹಾಸ, ಐತಿಹಾಸಿಕ, ದಾಖಲೆಗಳು, ದಂತಕಥೆಗಳು – ಇಂಥ ಹಲವಾರು ಆಕರಗಳಿಂದ ಅವರು ತಮ್ಮ ಕತೆಗಳಿಗೆ ವಸ್ತುವನ್ನಾಗಿಸಿಕೊಂಡರು. ಸ್ವಂತ ವ್ಯಕ್ತಿತ್ವ ಹಾಗೂ ಮಿತಿಗಳಿಂದ ಪಾರಾಗಿ ಬೇರೆ ಜೀವಿಗಳ ಬದಕಿನಲ್ಲಿಯೂ ಸೇರಿಕೊಳ್ಳುವ ಪರಕಾಯ ಪ್ರವೇಶ ವಿದ್ಯೆ ಕತೆಗಾರನಿಗೆ ಅವಶ್ಯವಾದುದು ಎಂಬ ನಂಬಿಕೆ ಅವರಲ್ಲಿತ್ತು. ಭಾರತೀಯ ಸಂಸ್ಕೃತಿಗಳಿಗೆ ಹೊಂದಿದ ಬದುಕಿನ ಬೇರೆ ಬೇರೆ ಸನ್ನಿವೇಶಗಳನ್ನು ಕತೆ ರಚನೆಯ ಮೂಲಕ ಮಾಸ್ತಿ ಶೋಧಿಸಿದರು.

## ಮಾಸ್ತಿ ಕಥೆಗಳ ವಸ್ತು, ಆಶಯ ಮತ್ತು ವಿಶ್ಲೇಷಣೆ

**ಮೊಸರಿನ ಮಂಗಮ್ಮ:** ಮೊಸರು ಮಾರುವ ಹಳ್ಳಿಯ ಮುದುಕಿಯೊಬ್ಬಳ ಮನೋಘರ್ಷಣೆಯ ಸೂಕ್ಷ್ಮ ಸುಂದರ ಚಿತ್ರಣವನ್ನು ಕಟ್ಟಿಕೊಡುತ್ತದೆ. ಅಲ್ಲದೆ ತನ್ನ ಗಂಡ ಚಿಕ್ಕಂದಿನಲ್ಲೇ ತನ್ನನ್ನು ತೊರೆದು ನಾಜೂಕಿನ ಹೆಣ್ಣೊಬ್ಬಳಿಗೆ ಆಕರ್ಷಿತನಾಗಿ ಬಾಳನ್ನು ಬರಡುಮಾಡಿ ಹೋದ ತನ್ನ ದಾರುಣ ಅನುಭವ ಬೇರಾರಿಗೂ ಆಗದಿರಲೆಂದು, ಗಂಡನ ಕಣ್ಣಿಗೆ ಅಂದವಾಗಿ ಕಾಣುವಂತೆ ಹೆಣ್ಣಿರಬೇಕೆಂದು ಅವಳು ಕೊಡುವ ಬುದ್ಧಿವಾದ, ಚಿಕ್ಕಂದಿನಿಂದಲೂ ಸಾಕಿ ಸಲಹಿ ದೊಡ್ಡವನನ್ನಾಗಿ ಮಾಡಿದ ತನ್ನನ್ನು ಕಡೆಗಣಿಸಿ ಎಡಗಾಲದಲ್ಲಿ ಬಂದ ಮಡದಿಯ ಮಾತಿಗೆ ತಾಳ ಹಾಕುವ ಮಗನ ಮೇಲೆ ಅಧಿಕಾರ ಹೊಂದುವ ಅವಳ ಚಪಲ ಮತ್ತು ತನ್ನ ಮಗನನ್ನು ತನ್ನಿಂದ ದೂರಮಾಡುತ್ತಿರುವಳೆಂದು ಸೊಸೆಯ ಮೇಲೆ ಅವಳು ಕಾರುವ ಸಿಟ್ಟು, ಆಕ್ರೋಶ, ಮೊಮ್ಮಗ ತನ್ನೆಡೆಗೆ ಬರಲಿಲ್ಲವೆಂದು ಹಲುಬುವ ಆಕೆಯ ಹೃದಯದ ತುಡಿತ, ಪರಿಸ್ಥಿತಿಯ ದುರ್ಲಾಭ ಪಡೆಯಲು ಬಂದ ರಂಗಪ್ಪನ ಬೇಳುವೆ ಮಾತಿಗೆ ಬಲಿಯಾಗದೆ ಅವಳು ತೋರುವ ಅಚಂಚಲ ನಿಷ್ಠೆ ಮತ್ತು ಮಗ ಬೇರೆಯಾದ ಮೇಲೆ ತನ್ನ ಸಂಪಾದನೆ ಮತ್ತಾರಿಗೆಂದು ಆ ಅಪರ ವಯಸ್ಸಿನಲ್ಲಿ ಮಕಮಲ್‌ಜಾಕೀಟು ಹೊಲಿಸಿಕೊಂಡು ಹಾಕಿಕೊಳ್ಳುವ ಅವಳ ಮನೋವಿಭ್ರಮ ಹೀಗೆ ಅವಳ ಮನಸ್ಸಿನ ಪದರ ಪದರವನ್ನೂ ಅತಿ ಸೂಕ್ಷ್ಮವಾಗಿ ಕತೆಗಾರರು ವಿಶ್ಲೇಷಿಸಿದ್ದಾರೆ.

ಮೊಸರಿನ ಮಂಗಮ್ಮನಂತೂ ತುಂಬ ಜಟಿಲವಾದ ಸಾಂಸಾರಿಕ ಸಂಬಂಧಗಳಲ್ಲಿ ನೆಮ್ಮದಿಯಿಂದಿರಬೇಕಾದರೆ ಹೊಂದಾಣಿಕೆ ಎಷ್ಟು ಮುಖ್ಯ ಎಂಬುದನ್ನು ಸೂಚಿಸುವವಳು. ಎಲ್ಲಿಯೂ ಅಸಹಜತೆ ಸುಳಿಯದಂತೆ ಅತಿರೇಕ ತಲೆಹಾಕದಂತೆ ತುಂಬ ಒಪ್ಪವಾಗಿ ಸತ್ವಯುತವಾಗಿ ಕಲಾತ್ಮಕ ಚಿತ್ರಣ ಈ ಕತೆಯಲ್ಲಿ ಇದೆ.

ಹೆಣ್ಣಿನ ಬಾಳನ್ನು ಚಿತ್ರಿಸುವಾಗ ಮಾಸ್ತಿಯವರು ಅವಳ ನೋವು, ಯಾತನೆಗಳನ್ನು ಯಥಾರ್ಥವಾಗಿ ಹಾಗೂ ಅನುಕಂಪದಿಂದ ತಮ್ಮ ಕತೆಗಳಲ್ಲಿ ಧ್ವನಿಸಿದ್ದಾರಾದರೂ ಅವಳನ್ನು ದುರ್ಬಲ, ಅಸಹಾಯ ಅಥವಾ ಹೇಡಿಯೆಂದು ಚಿತ್ರಿಸಿಲ್ಲ ಎನ್ನುವುದನ್ನು ಅವಶ್ಯವಾಗಿ ಗಮನಿಸಬೇಕಾಗುತ್ತದೆ. ಉದಾ: ರಂಗಸಾಮಿಯ ಅವಿವೇಕ'ದ ಇಂದಿರೆ, 'ಗೌತಮಿ ಹೇಳಿದ ಕತೆ'ಯ ಗೌತಮಿ, 'ಚಿಕ್ಕವ್ವ'ದ ಚಿಕ್ಕವ್ವ, 'ಪುತ್ರಕಾಮೇಷ್ಟಿ'ಯ ಸೀತಮ್ಮ, 'ಕಾಮನಹಬ್ಬದ ಆಚರಣೆ'ಯ ಸಾವಿತ್ರಮ್ಮ ತಮ್ಮ ಬಾಳಿನ ಸಮಸ್ಯೆಗಳನ್ನು ಧೈರ್ಯವಾಗಿಯೇ ಎದುರಿಸುತ್ತಾರೆ. ಈ ಮಾತು 'ಮೊಸರಿನ ಮಂಗಮ್ಮ', 'ಚಂದ್ರವದನಾ', 'ಚೆನ್ನಮ್ಮ' ಈ ಕತೆಗಳ ನಾಯಿಕೆಯರಿಗೂ ಸರಿಯಾಗಿ ಅನ್ವಯಿಸುತ್ತದೆ. ಮಂಗಮ್ಮ ಹಾಗೂ ಅವಳ ಸೊಸೆ ನಂಜಮ್ಮರ ನಡುವೆ ಕೌಟುಂಬಿಕ ಅಧಿಕಾರದ ಬಗ್ಗೆ ಸೀಮಿತ ಹೋರಾಟ ನಡೆಯುತ್ತದೆ. ಆದರೆ ಅವರು ತಮ್ಮ ಸಮಸ್ಯೆಯನ್ನು ಉಪಾಯವಾಗಿಯೇ ಪರಿಹರಿಸಿಕೊಳ್ಳುತ್ತಾರೆ. ಚಂದ್ರವದನಾ ವೇಶ್ಯೆ ಹಾಗೂ ಪರಾವಲಂಬಿಯಾದರೂ ತನ್ನ ತಾಯ್ತನದ ಹಕ್ಕಿಗಾಗಿ ಅವಳು ಯಶಸ್ವಿಯಾಗಿ ಹೋರಾಡುತ್ತಾಳೆ ಎಂಬ ಮಾನವಿಕ ಅರಿವು ಮತ್ತು ಆಲೋಚನೆಗಳು ಹೆಣ್ಣಿನ ಪಾತ್ರಗಳಲ್ಲಿ ಕಂಡು ಬರುತ್ತದೆ. ನಮ್ಮ ಹಳ್ಳಿಯ ಹೆಣ್ಣುಮಕ್ಕಳ ತೋರಿಕೆಯ ಕಾಠಿನ್ಯದ ಒಡಲಲ್ಲಿ ಹುದುಗಿರುವ ಮುಗ್ಧವೂ ಅಕುಟಿಲವೂ ಸಾಂದ್ರವೂ ಆದ ಶುಚಿಪ್ರೇಮವನ್ನು ಪ್ರತಿನಿಧಿಸುವ ಕತೆಗಳು. ಉಪಾಧ್ಯಾಯರ ಬಗ್ಗೆ ನಾವು ತೋರಿಸುವ ನಿರ್ಲಕ್ಷ್ಯ ಅನಾದರಗಳ ಪ್ರತೀಕವಾಗಿ ಮೇಷ್ಟರು ಕಾಣುತ್ತಾರೆ. ಉಪ್ಪಿಗೆ ಕಾಸಿಲ್ಲದೆ ಹೆಂಡತಿಯ ಮಾತನ್ನು ಕೇಳಲಾಗದೆ ಶಾಲೆಗೆ ಬಂದು ಅವರು ಮಾಡುವ ಗಡಿ ಬಿಡಿ ಒಂದೆಡೆ ನಗೆಯನ್ನು ತಂದರೆ, ಮರುಕ್ಷಣದಲ್ಲೇ ಮರುಕವನ್ನು ಹುಟ್ಟಿಸುತ್ತದೆ. ಇನ್‌ಸ್ಪೆಕ್ಟರು ಬಂದು ಗದರಿಸಿದಾಗ 'ಮಹಾಸ್ವಾಮಿ' ಎನ್ನುವ ಮಾತಲ್ಲದೆ ಬೇರೇನೂ ಅವರ ಬಾಯಿಂದ ಹೊರಡುವುದೇ ಇಲ್ಲ. ಅವರ ನಿಷ್ಕಪಟತೆ, ನಿಸ್ವಾರ್ಥ, ದೈನ್ಯಜೀವನ ತುಂಬ ಸಹಾನುಭೂತಿಪರ ಅಭಿವ್ಯಕ್ತಿಯನ್ನು ಹೊಂದಿವೆ. ಹೆಂಡತಿ ಸ್ವಲ್ಪ ಬಾಯಾಳಿಯಾದರೂ, 'ನಾನು ಹುಡುಗಿಯೆಂದು ತಿಳಿದು ನಿಮಗೆ ಸಂಬಳ ಹೆಚ್ಚಿಸಿಯಾರು ನಿಜಸ್ಥಿತಿಯನ್ನು ತಿಳಿಸಿ' ಎನ್ನುವಲ್ಲಿನ ಅನ್ಯಾದೃಶವಾದ ನಿಷ್ಕಾಪಟ್ಯ, ಸಾಯುವಾಗ ಕಾಲು ಹಿಡಿದುಕೊಂಡು 'ನಾನು ಹೋಗುತ್ತೇನೆ, ನನ್ನ ಮೇಲೆ ಏನೂ ಕೋಪವನ್ನು ಇಟ್ಟುಕೊಳ್ಳಬೇಡಿ. ನಿಮಗೆ ಬಹಳ ಕಷ್ಟವಾಗುವ ಹಾಗೆ ಮಾಡಿದೆ ಎಷ್ಟೋಸಲ' ಎನ್ನುವಲ್ಲಿನ ವಿನಯಶ್ರೀ ಆಕೃತಿಮ ಪ್ರೇಮ ನಮ್ಮ ಸಂಸ್ಕೃತಿಯಲ್ಲಿನ ಶುದ್ಧಾಂಶಗಳಾಗಿವೆ. ಮಾಸ್ತಿಯವರ ಸೂಕ್ಷ್ಮದರ್ಶಕ ಪ್ರತಿಭೆ ಪಾತ್ರಗಳ ಅಂತರ್ಯವನ್ನು ಹೊಕ್ಕು ಅಲ್ಲಿ ಹುದುಗಿರುವ ಮಾನವೀಯತೆಯ ಸೆಲೆಯನ್ನು ಹೇಗೆ ಮೇಲೆತ್ತಿ ತೋರಿಸಬಲ್ಲದೆಂಬುದಕ್ಕೆ ಇದು ಸಾಕ್ಷಿಯಾಗಿದೆ.

**ವೆಂಕಟಿಗನ ಹೆಂಡತಿ** ಕಥೆ : ವೆಂಕಟಿಗ ಒಬ್ಬ ಸಾಮಾನ್ಯ ಶ್ರಮಜೀವಿಯಾದರೂ ಅವನಲ್ಲಿ ಮಾಸ್ತಿಯವರು ಅಸಾಧಾರಣ ಮಾನವೀಯ ಗುಣಗಳನ್ನು ಗುರುತಿಸುತ್ತಾರೆ. ತಾನು ಪ್ರೀತಿಸಿದ ಹೆಣ್ಣು ತನಗೆ ಎರಡು ಬಗೆದರೂ, ಸಹಜ ಭಾವನೆಗಳಾದ ದ್ವೇಷ ಅಸೂಯೆಗಳನ್ನು ಮೀರಿ ಅವಳನ್ನೂ, ತನ್ನದಲ್ಲದ ಅವಳ ಮಗುವನ್ನೂ ಒಪ್ಪಿಕೊಳ್ಳುವ ಹೃದಯವಂತಿಕೆ ಅವನಲ್ಲಿದೆ. ಈ ಕತೆಯ ಕಥನಕ್ರಮ ಕೂಡ ವೈಶಿಷ್ಟ್ಯಪೂರ್ಣವಾದುದು. ವೆಂಕಟಿಗನ ಹೆಂಡತಿ'ಯ ಸಮಸ್ಯೆಯನ್ನೇ ಮಾಸ್ತಿಯವರು ಭಿನ್ನ ಸಂಸ್ಕೃತಿಯ ಸಂದರ್ಭದಲ್ಲಿ 'ಆಂಗ್ಲ ನೌಕಾ ಕ್ಯಾಪ್ಟನ್'ದಲ್ಲಿಟ್ಟು ನೋಡಿದ್ದಾರೆ. ಅಶಿಕ್ಷಿತನಾದ ವೆಂಕಟಿಗನಿಗೆ ಗಂಡು–ಹೆಣ್ಣಿನ ಸಂಬಂಧದ ಬಗ್ಗೆ ಔದಾರ್ಯದ ತಿಳಿವಳಿಕೆ ಮತ್ತು ಸಾಮಾಜಿಕ ಜೀವನದ ದೂರ ದೃಷ್ಟಿಯ ಅಂಶಗಳು ಅವನಲ್ಲಿ ಇವೆ.

**ಮಸುಮತ್ತಿ ಕಥೆ**: ಮಸುಮತ್ತಿ'ಯಲ್ಲಿ ಪಾಶ್ಚಾತ್ಯ ಪಾತ್ರಗಳಿಗೆ ಕ್ರಿಯೆಯಲ್ಲಿ ಭಾಗವಹಿಸುವ ಸ್ವಾತಂತ್ರ್ಯ ಅಥವಾ ಶಕ್ತಿ ಇಲ್ಲ. ಆದರೆ 'ರಂಗನಹಳ್ಳಿಯ ರಾಮ'ದಲ್ಲಿ ಫರ್ಕುವರ್‌ತಿಟ್ಟಿನಲ್ಲಿ ಅಡಗಿ ಮರೆಯಾದ ರಂಗನಾಥನ ದೇವಾಲಯವನ್ನು ಬೆಳಕಿಗೆ ತರುವಲ್ಲಿ ಪಾತ್ರ ವಹಿಸುತ್ತಾನೆ. ರಂಗನಹಳ್ಳಿಯವರು ಉಳಿಸಿಕೊಂಡರು ಬಂದ ಹಾಡಿನ ಒಗಟನ್ನು ಬಿಡಿಸುವಲ್ಲಿ ಅವನು ನೆರವೇರಿಸುವ ಕಾರ್ಯ ಬೇರ್ಪಡಿಸುವುದಾಗಿರದೆ ಜೋಡಿಸುವುದಾಗಿರುವುದರಿಂದ ಅದೊಂದು ಆರೋಗ್ಯಕರವಾದ ಚಟುವಟಿಕೆಯಾಗುತ್ತದೆ. ಪಾಶ್ಚಾತ್ಯ ಸಂಸ್ಕೃತಿಯ ಪ್ರಾಬಲ್ಯದ ಬಗ್ಗೆ ಮಾಸ್ತಿಯವರು ಎಷ್ಟೇ ಸಾಶಂಕಿತರಾಗಿದ್ದರೂ ಅವರು ಒಳ್ಳೆಯ ಅಂಶಗಳನ್ನು ಗ್ರಹಿಸುವುದರಲ್ಲಿ ಹಿಂದೆ ಬೀಳಲಿಲ್ಲ ಎನ್ನುವುದಕ್ಕೆ ಈ ಕತೆ ನಿದರ್ಶನವಾಗಿದೆ. 'ಮಸುಮತ್ತಿ'ಯಲ್ಲಿ ಕೃಷ್ಣಯ್ಯ ಕಾಯ್ದಿರಿಸಿದ ಗೋಪಾಲಕೃಷ್ಣನ ಅಪೂರ್ಣ ಚಿತ್ರಗಳು ಭಾರತೀಯ ಸಂಸ್ಕೃತಿಯ ಸಂಕೇತವಾದರೆ, ಕೋರ್ಟ್ನಿ, ಎಮಿಲಿ ಹಾಗೂ ಫರ್ಕುವರ್‌ಈ ಸಂಸ್ಕೃತಿಯನ್ನು ನೋಡುವ ಮೂರು ದೃಷ್ಟಿಗಳ ಸಂಕೇತವಾಗುತ್ತಾರೆ.

**ಡೂಬಾಯಿ ಪಾದ್ರಿಯ ಒಂದು ಪತ್ರ**: ಟಿಪ್ಪುಸುಲ್ತಾನನ ಕಾಲದಲ್ಲಿ ನಡೆದ ಒಂದು ಘಟನೆಯನ್ನು ವಿವರಿಸುತ್ತದೆ. ಬಲವಂತ ಮತಾಂತರದಿಂದಾಗಿ ಹಿಂದೂವೊಬ್ಬ ಮಹಮ್ಮದೀಯನಾಗಿ, ಮತ್ತೆ ತನ್ನ ಪೂರ್ವಮತಕ್ಕೆ ಹಿಂತಿರುಗಲಸಾಧ್ಯವಾದುದಕ್ಕಾಗಿ ರೊಚ್ಚಿಗೆದ್ದು, ಕೊನೆಗೆ ಟಿಪ್ಪುವಿನ ರಾಜ್ಯತನವನ್ನೇ ಉರುಳಿಸಲು ರಾಜಮಾತೆಯೊಡನೆ ಪಿತೂರಿ ನಡೆಸಿ ಸಿಕ್ಕಿ ಬಿದ್ದು ನಗುನಗುತ್ತಾ ಆನೆ ಕಾಲಿಗೆ ಬಲಿಯಾದ ರೋಮಾಂಚಕಾರೀ ಕತೆಯಿದು. ನಮ್ಮ ಹಿಂದೂಧರ್ಮದಲ್ಲಿರುವ 'ಒಂದೇದಾರಿ'ಯ ಸಂಕುಚಿತ ಹುಳುಕೊಂದನ್ನು ತೋರಿಸುವುದರ ಜೊತೆಗೆ ಅದರಿಂದಾಗುವ ಅನಾಹುತ ಪರಂಪರೆಗಳ ಭೀಕರ ಅನುಭವವನ್ನು ಸೊಗಸಾಗಿ ಹೃದ್ಯವಾಗಿ ದೃಢವಾಗಿ ಈ ಕತೆ ಮೂಡಿಸುವುದರಲ್ಲಿ ಯಶಸ್ವಿಯಾಗಿದೆ. ಆದರೆ ಕಥಾರಂಭದ ಅಂಶಗಳು ತೀರ ಉದ್ದವಾಗಿದ್ದು ಮೂಲ ಕತೆಗೆ ಪೋಷಕವಾಗದೆ ಕತೆಯ ನಡೆ ಕುಂಟುವಂತಾಗಿದೆ.

ಢೂಬಾಯಿ ಪಾದ್ರಿಯ ಒಂದು ಪತ್ರದಲ್ಲಿ ಮುಸ್ಲಿಮರು ಮತಾಂತರಕ್ಕೆ ಬಳಸಿದ ಒತ್ತಾಯದ ವಿವರಣೆ ದೊರೆಯುತ್ತದೆ. ನರಸಿಂಹ ಅರಮನೆಗೆ ತುಳಸಿ ಎತ್ತುವ ಬ್ರಾಹ್ಮಣಗಿತ್ತಿಯ ಮಗ. ಮುಸ್ಲಿಮರು ತುಳಸಿ ಎತ್ತಲು ಹೋದ ನರಸಿಂಹನ ಮುಖಕ್ಕೆ ಉಗಿದು ಜಾತಿ ಕೆಡಿಸಿ ಮತಾಂತರಗೊಳಿಸಿದರು. ಬ್ರಾಹ್ಮಣಗಿತ್ತಿಯ ದೂರಿನ ಮೇಲೆ ನರಸಿಂಹ ಪತ್ತೆಯಾಗಿ ಅರಮನೆಯಲ್ಲಿ ವಿಚಾರಣೆ ನಡೆದು ಮುಕ್ತನಾದ.ಆದರೆ ನರಸಿಂಹನನ್ನು ಜಾತಿಗೆಟ್ಟವನೆಂದು ಮತ್ತೆ ಜಾತಿಗೆ ಸೇರಿಸಿಕೊಳ್ಳಲು ಬ್ರಾಹ್ಮಣರು ನಿರಾಕರಿಸಿದರು. ನರಸಿಂಹ ನಿರಾಶರಾಗಿ ಬ್ರಾಹ್ಮಣ ಮತವನ್ನು ಮುತ್ತಾಳ ಮತವೆಂದು ದಾರಿ ತೋರದೆ ಮತ್ತೆ ಮುಸ್ಲಿಮನಾಗಿ, ಅಬ್ಬಾಬಸ್‌ಹೆಸರಿನಿಂದ ನಿಷ್ಠಾವಂತ ಮುಸ್ಲಿಮ ಸೇವಕನಾಗಿ, ಟೀಪುವಿನ ವಿಶ್ವಾಸ ಗಳಿಸಿದನು. ಇತ್ತ ಜಾತಿ ಕೆಡಿಸಿದ ಮುಸ್ಲಿಮರು, ಅತ್ತ ಜಾತಿಗೆ ಸೇರಿಸಿಕೊಳ್ಳದ ಬ್ರಾಹ್ಮಣರ ಬಗ್ಗೆ ಸುಪ್ತವಾಗಿ ಸೇಡು ತೀರಿಸಿಕೊಳ್ಳುವ ಬಯಕೆ ಬೆಳೆಯಿತು. ಕರುಣೆ ತೋರಿದ್ದ ಹಿಂದೂ ರಾಜ–ರಾಣಿಯರ ಬಗ್ಗೆ ಅಬ್ಬಾಬಸ್‌ನರಸಿಂಹನಿಗೆ ವಿಶ್ವಾಸವಿತ್ತು. ಹಿಂದೂ ರಾಜನನ್ನು ಸಿಂಹಾಸನಕ್ಕೆ ತರುವುದಕ್ಕೆ ಪರವಾಗಿ ಟೀಪುವಿನ ವಿರುದ್ಧವಾಗಿ ಸಂಚಿನಲ್ಲಿ ಭಾಗಿಯಾದನು. ಸಂಚು ಬಯಲಾಗಿ ಟೀಪುವಿನ ಕೋಪಕ್ಕೆ ತುತ್ತಾದನು. ಆನೆಯ ಕಾಲಿನ ತುಳಿತದ ಶಿಕ್ಷೆಯನ್ನು ಅಬ್ಬಾಬಸ್‌ನರಸಿಂಹ ನಗುನಗುತ್ತಲೇ ಅನುಭವಿಸಿದನು. ಸಂಚಿನಲ್ಲಿ ಸೇರಿರಬಹುದೆಂಬ ಅನುಮಾನದಿಂದ ಪ್ರಧಾನಿ ಕೃಷ್ಣರಾಯರು ಗುಪ್ತವಾಗಿ ಕೊಲೆಯಾದರು. ಅವರ ಸುಂದರ ಸಾಧ್ವಿಗೆ ಟೀಪುವಿನ ಅಂತಃಪುರ ಸೇರುವ ದುರ್ಗತಿ ಒದಗಿತು. ಆದರೆ ಬ್ರಾಹ್ಮಣನಾದ ಪೂರ್ಣಯ್ಯ ಮಾತ್ರ ಟೀಪುವಿನ ನಿಷ್ಠಾವಂತ ಸೇವಕನಾಗಿ ಮುಂದುವರಿಸಿದನು. ಕ್ರಮೇಣ ಮುಸ್ಲಿಮರು ರಾಜ್ಯವನ್ನು ಕಳೆದುಕೊಂಡರು. ಹಿಂಸೆ ಎಂದೂ

ಇಸ್ಲಾಂ ಧರ್ಮ ಪ್ರಚಾರಕ್ಕೆ ಸಹಕಾರಿಯಾಗಲಿಲ್ಲ. ಟೀಪು ಸತ್ತ ಅನಂತರ ಅವನ ಮಕ್ಕಳಿಗೆ ರಾಜ್ಯ ದೊರೆಯುವಂತೆ ಪ್ರಯತ್ನಿಸಿ ವಿಫಲನಾದ ಪೂರ್ಣಯ್ಯ ಹಿಂದೂ ರಾಜನಿಗೆ ದಿವಾನನಾಗಿ ಸ್ವಾಮಿನಿಷ್ಠೆಯನ್ನು ಮುಂದುವರಿಸಿದನು.

ಪೂರ್ಣಯ್ಯನ ಮುಸ್ಲಿಂ ಪ್ರಭುವಿನ ನಿಷ್ಠೆ ಹಿಂದೂ ಪ್ರಭುವಿನ ನಿಷ್ಠೆಯಾಗಿ ಮಾರ್ಪಾಡಾಯಿತು. ಮುಸ್ಲಿಮರಿಗೆ ಬ್ರಾಹ್ಮಣರ ನಿಷ್ಠೆ ಮತ್ತು ವಿರೋಧ ಏಕಕಾಲದಲ್ಲಿ ವೈರುಧ್ಯವಾಗಿ ಕಂಡರೂ ಮುಂದುವರಿಯಿತು. ಮುಸ್ಲಿಂ ಆಳಿಮದ ಟೀಪುವಿಗೂ ಶ್ರೀರಂಗ ಪಟ್ಟಣದ ರಂಗನಾಥನ ಮೇಲೆ ಎಲ್ಲಿಲ್ಲದ ಭಕ್ತಿ! ಟೀಪು ತನ್ನ ದಂಡಿಗೆ ಎಲ್ಲಿಯೂ ರಂಗ ಹೆಸರಿನ ದೇವಾಲಯಗಳನ್ನು ನಾಶಮಾಡದಂತೆ ಕಟ್ಟು ನಿಟ್ಟಾದ ಎಚ್ಚರಿಕೆ ಕೊಟ್ಟಿದ್ದನು. ಅವಾಗಲೇ ಬಿಳಿಗಿರಿ ಮಾಗಡಿ ದೇವಾಲಯಗಳ ಶ್ರೀನಿವಾಸನೂ ಶೀಬಿಯ ನರಸಿಂಹನೂ ರಂಗನೆಂದು ಪ್ರಸಿದ್ಧರಾದರು. ಅಲ್ಲದೆ ಟೀಪು ಬ್ರಾಹ್ಮಣರನ್ನೇ ಉನ್ನತ ಅಧಿಕಾರಿಗಳನ್ನಾಗಿ ನೇಮಿಸಿಕೊಂಡು ಟೀಪುವಿನ ಬ್ರಾಹ್ಮಣರ ಬಗೆಗಿನ ನಿಷ್ಠೆ ಮತ್ತು ವಿರೋಧವೂ, ಬ್ರಾಹ್ಮಣರ ಮುಸ್ಲಿಮರ ಸಂಬಂಧದಷ್ಟೇ ವೈರುಧ್ಯವೆಂದರೂ ವಾಸ್ತವಿಕ ಸಂಗತಿ. ಬ್ರಾಹ್ಮಣ ಮತ್ತು ಮುಸ್ಲಿಮರ ಪ್ರೀತಿ ದ್ವೇಷದ ಸಂಬಂಧ ಸಂಕೀರ್ಣ ಸಂಬಂಧಕ್ಕೆ ಸಾಕ್ಷಿಯಾಗಿದೆ.

ಸುಶೀಲ ರಜಾಕರ್‌ಸ್ವಾತಂತ್ರ್ಯ ಬಂದ ಅನಂತರ ಹೈದರಾಬಾದಿನಲ್ಲಿ ಉಂಟಾದ ಹಿಂದೂ ಮುಸ್ಲಿಮರ ಸಮಸ್ಯೆಯಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದೊಡನೆ ನವಾಬರ ಆಡಳಿತಕ್ಕೆ ಸೇರಿದ ಹೈದರಾಬಾದಿನಲ್ಲಿ ಇಸ್ಲಾಂ ನಿಷ್ಠ ಗುಂಪೊಂದು 'ರಜಾಕರರ' ಹೆಸರಿನಲ್ಲಿ ಹುಟ್ಟಿಕೊಂಡಿತು. ಅವರು ತಮ್ಮ ನಿಷ್ಠೆಯನ್ನು ಪಾಕಿಸ್ತಾನಕ್ಕೆ ಎಂದು ಘೋಷಿಸಿ, ಹಿಂದೂಗಳೂ ಅದನ್ನು ಒಪ್ಪುವಂತೆ ಒತ್ತಾಯ ಮಾಡುತ್ತಿದ್ದರು. ಒಪ್ಪದವರು ಹಿಂಸೆಗೆ ಮತ್ತು ಅವರ ಹೆಂಗಸರು ಅತ್ಯಾಚಾರಕ್ಕೆ ಒಳಗಾಗುತ್ತಿದ್ದರು. ರಜಾಕರರ ಹಿಂಸೆಗೆ ಗುರಿಯಾದ ಹಿಂದೂ ಕುಟುಂಬದ ಹೃದಯ ವಿದ್ರಾವಕ ಕತೆಯೇ ಸುಶೀಲ ರಜಾಕರ್‌ಅವರ ಹಿಂಸೆಯಿಂದ ಶೀಲ ರಕ್ಷಿಸಿಕೊಳ್ಳಲು ಹಿಂದೂ ತರುಣಿ ಸುಶೀಲ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಳು. ಅವಳ ಅಣ್ಣ ಹುಚ್ಚನಾದನು. ಇಡೀ ಕುಟುಂಬ ಮುಸ್ಲಿಮರ ಹಿಂಸೆಗೆ ನಾಶವಾದ ಚಿತ್ರ. ಇದರಿಂದ ರಾಜಕೀಯ ಸ್ವಾತಂತ್ರ್ಯ ಧಾರ್ಮಿಕ ಸ್ವಾತಂತ್ರ್ಯಕ್ಕೆ ದಾರಿಯಾಗಲಿಲ್ಲವೆಂಬ ಧ್ವನಿ ಅಡಗಿದೆ. ಜಾತಿಯತೆಯನ್ನು ಕೂಡ ಕಂಡುಕೊಳ್ಳುವ ಒಂದು ವಿಚಾರವನ್ನು ಇದರಲ್ಲಿ ತಿಳಿಸಿದ್ದಾರೆ.. ಇವರು ಬ್ರಾಹ್ಮಣರೇ ಶ್ರೇಷ್ಠರು ಎಂಬುದನ್ನು ನಿರ್ದಿಷ್ಟವಾಗಿ ವ್ಯಕ್ತಪಡಿಸುತ್ತಾರೆ.ಅವರ ವೇಷಭೂಷಣ ಎಲ್ಲವನ್ನು ಅನುಸರಿಸುವ ಕ್ರಿಯೆಯಾಗಿತ್ತು. ಅವರಿಗೆ ಬುದ್ಧಿ ಬಂದಾಗ ಅವರೇ ಬರುವವರು. ಹೀಗೆ ಬಲವಂತದಿಂದ ಮತಕ್ಕೆ ಸೇರಿಸಿಕೊಳ್ಳಬಾರದು.

**ಜೋಗ್ಯೋರ ಅಂಜಪ್ಪನ ಕೋಳಿಕಥೆ** : ಇಲ್ಲಿ ವಿನಾಕಾರಣ ಅಪರಾಧಿಯಾದವನ ಅಸಹಾಯಕತೆಯನ್ನು ಚಿತ್ರಿಸುತ್ತದೆ. ಇಲ್ಲಿ ನ್ಯಾಯ ವಿತರಣೆಯ ಅಸಮರ್ಪಕತೆಗಿಂತ, ಅನ್ಯಾಯಕ್ಕಿಂತ ಜುಲ್ಮಾನೆ ತೆತ್ತ ಅಂಜಪ್ಪನಿಗೆ ಜೀವನದ ಅನುಭವ ತಂದುಕೊಡುವ ವಿವೇಕ ಮುಖ್ಯವಾಗುತ್ತದೆ. ಅಂಜಪ್ಪನಿಗೆ ಕೋಳಿ ದಾನವಾಗಿ ಬಂದಿದೆಯೆನ್ನುವುದನ್ನು ಆತ ವೈಯಕ್ತಿಕ ಕಾರಣಗಳಿಂದಾಗಿ ಬಹಿರಂಗಗೊಳಿಸುವುದು ಸಾಧ್ಯವಿರುವುದಿಲ್ಲ. ಹೀಗಾಗಿ ಅವನು 'ಅನ್ಯಾಯ'ದ ಶಿಕ್ಷೆಗೆ ಒಳಗಾಗಬೇಕಾಗುತ್ತದೆ, ಅಂಜಪ್ಪ ತನ್ನ ಕತೆಯನ್ನು ತಾನೇ ಹೇಳುತ್ತಾನೆ. ಆದರೆ ಇದು ಅವನ ತಾರುಣ್ಯದಲ್ಲಿ ನಡೆದ ಘಟನೆಯಾದುದರಿಂದ ಅದನ್ನು ಹೇಳುವ ಶೈಲಿಯಲ್ಲಿ ಹಗುರು ತಾನಾಗಿಯೇ ಬಂದುಬಿಡುತ್ತದೆ. ಕೋಳಿಯನ್ನು ದಾನ ಮಾಡಿದ ಹುಡುಗಿ ತನ್ನನ್ನು ಬಲಿಪಶುವಾಗಿ

ಮಾಡಿದ ಮೋಸವನ್ನು ಕೂಡ ಆತ ಈಗ ಹಾಸ್ಯದ ದೃಷ್ಟಿಯಿಂದ ನೋಡಬಲ್ಲ. ಈ ಕತೆಗೆ ಮಾಸ್ತಿಯವರು ಒದಗಿಸಿದ ಚೌಕಟ್ಟು ನ್ಯಾಯದ ಕಲ್ಪನೆಯ ಹಲವಾರು ಮುಖಗಳನ್ನು ತೆರೆದು ತೋರಿಸುವ ಮೂಲಕ ಕತೆಯನ್ನು ಗ್ರಹಿಸುವುದಕ್ಕೆ ಅನುಕೂಲತೆಗಳನ್ನೊದಗಿಸಿದೆ. ಇಲ್ಲಿಯ ತೀರ್ಪು' ಮತ್ತು 'ಜೋಗ್ಯೋರ ಅಂಜಪ್ಪನ ಕೋಳಿಕತೆ' ಅನಾಗರಿಕರೆಂದು ಅವಿದ್ಯಾವಂತರೆಂದು ಭಾವಿಸಲ್ಪಡುವ ಗ್ರಾಮೀಣರ ಸರಳತೆ, ಸತ್ಯನಿಷ್ಠೆ, ಧೀರ ಮನೋಭಾವ, ನಿಷ್ಕಪಟತೆಗಳನ್ನು ಅಭಿವ್ಯಂಜಿಸುತ್ತವೆ. 'ವೆಂಕಟಶಾಮಿಯ ಪ್ರಣಯ' ಸೋರಲೀ ಪ್ರಸಂಗ'ಗಳು ದುರಂತ ಪ್ರೇಮವನ್ನು ಚಿತ್ರಿಸುವ ಕತೆಗಳು. ಮೊದಲನೆಯದಂತೂ ತುಂಬ ಮನೋಜ್ಞವಾದ ಪರಿಣಾಮಕಾರೀ ಕತೆ.

ಹೆಣ್ಣು ಗಂಡಿನ ಪ್ರೇಮದ ಮಹೋನ್ನತಿ ಇರುವುದು ಕೇವಲ ದೇಹಸಂಪರ್ಕದಲ್ಲಲ್ಲ: ಅವರ ಮನೋಧರ್ಮದಲ್ಲಿ– ಎನ್ನುವುದರ ಜೀವಂತಚಿತ್ರಣ 'ವೆಂಕಟಿಗನ ಹೆಂಡತಿ'. ತನ್ನ ಹೆಂಡತಿ ತನ್ನನ್ನುಳಿದು ಶ್ರೀಮಂತಿಕೆಯ ಆಮಿಷಕ್ಕೊಳಗಾಗಿ ಬೇರೊಬ್ಬನನ್ನು ಸೇರಿದರೂ, ಮನೆತನದ ಮರ್ಯಾದೆ ಮಣ್ಣು ಪಾಲಾಯಿತೆಂದು ಹೆತ್ತವಳೇ ಹಳಹಳಿಸಿದರೂ ವೆಂಕಟಿಗ ಚಿತ್ತಸ್ಖಲಿತನಾಗುವುದಿಲ್ಲ, ಭಾವಾವೇಶಗಳಿಗೆ ಒಳಗಾಗುವುದಿಲ್ಲ, ಪ್ರತೀಕಾರದ ಪ್ರಚಂಡಾಗ್ನಿಯನ್ನು ಹೃದಯದಲ್ಲಿ ಹೊರುವುದಿಲ್ಲ ಬದಲು ಅವಳ ಕ್ಷಣಿಕ ದೌರ್ಬಲ್ಯಕ್ಕಾಗಿ ಅಪ್ರಬುದ್ಧ ಮನಸ್ಸಿಗಾಗಿ ಮರುಗುತ್ತಾನೆ. ಅವಳಿಗೆ ಒಳಿತಾಗಲೆಂದು ಹಾರೈಸಿ ಅವಳಿಂದ ದೂರ ಸರಿಯುತ್ತಾನೆ. ಕೊನೆಗೆ ಮಡದಿಯನ್ನಪಹರಿಸಿದ ಶ್ರೀಮಂತ ತಕ್ಕ ಸಾವನ್ನು ಪಡೆದಾಗ, ಆ ಹೆಣ್ಣು ಮತ್ತೆ ಮನದಿನಿಯನನ್ನು ಅರಸಿಕೊಂಡು ಬರುತ್ತದೆ. ಆಗಲೂ ಹೇವರಿಸದೆ, ಅಶುಚಿಯ ಭಾವನೆಯನ್ನು ಮನಸ್ಸಿಗೆ ತಾರದೆ ತೆರೆದ ಹೃದಯದಿಂದ ಉದಾತ್ತ ಅಂತಃಕರಣದಿಂದ ಅವಳನ್ನು ವೆಂಕಟಿಗ ಆಹ್ವಾನಿಸುತ್ತಾನೆ. ಬೇರೊಬ್ಬರಿಂದ ಜನಿಸಿದ ಮಗುವನ್ನು ಮಡದಿಯ ಸಂತಸಕ್ಕಾಗಿ ತನ್ನದೆಂಬಂತೆಯೇ ಪ್ರೀತಿಸುತ್ತಾನೆ. ಈ ವಿಶಾಲ ಮನೋಭಾವ, ನಿರ್ಮಲ ಸಹಾನುಭೂತಿ, ಅಕುಟಿಲ ಅಕ್ಕರೆ, ಸ್ಥಿತಿಪ್ರಜ್ಞೆ ವೆಂಕಟಿಗನ ಪಾತ್ರದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿವೆ; ಆ ಸಾಮಾನ್ಯ ಕೂಲಿಕಾರನ ಅಸಾಧಾರಣ ಹೃದಯಶ್ರೀಮಂತಿಕೆಯನ್ನು ಪ್ರಕಟಗೊಳಿಸಿವೆ. ಹರಿಹರ ತನ್ನ ರಗಳೆಗಳಲ್ಲಿ ಮಾಡಿದಂತೆ, ಕೈಲಾಸಂ ತಮ್ಮ ನಾಟಕಗಳಲ್ಲಿ ಮಾಡಿದಂತೆ ಶ್ರೀನಿವಾಸರು ತಮ್ಮ ಕತೆಗಳಹೃದಯ ಸಿಂಹಾಸನದಲ್ಲಿ ಸಾಮಾನ್ಯತಾಶ್ರೀಗೆ ವೈಭವದ ಪಟ್ಟಕಟ್ಟಿ ಕ್ರಾಂತಿಯನ್ನೇ ಮಾಡಿದ್ದಾರೆ. ಕತೆಯೊಳಗೆ ಕತೆ ಹುಟ್ಟುವ ಇಲ್ಲಿಯ ತಂತ್ರವೂ ಅತ್ಯಂತ ಸಹಜವಾಗಿದ್ದು ಉಚಿತವಾಗಿದ್ದು ವಸ್ತುವಿನ ಸ್ವರೂಪಕ್ಕೆ ತಕ್ಕುದಾಗಿದೆ.

ಈ ಎಲ್ಲ ಸಾಮಾಜಿಕ ಕತೆಗಳ ಹಿನ್ನೆಲೆಯಲ್ಲೂ ಲೇಖಕರ ಪ್ರಗಾಢವಾದ ವೈವಿಧ್ಯಮಯವಾದ ಜೀವನಾನುಭವ ಮಡುಗಟ್ಟಿ ನಿಂತಿದೆ. ಅನುಭವ ಪ್ರಾಮಾಣ್ಯವಿಲ್ಲದ ಕೇವಲ ಊಹನಾವಿಲಾಸದ ಕೃತಕ ಕಥನವಿಲ್ಲಿಲ್ಲ. ಯಾವ ಬಗಯ ಎಳೆದಾಟ ಅಸ್ತವ್ಯಸ್ತತೆಗಳಿಲ್ಲದೆ ಶ್ರಮ ಹಠಗಳಿಲ್ಲದೆ ಆವೇಶ ಆವೇಗಗಳಿಲ್ಲದೆ ಸುಲಲಿತವಾಗಿ ಸರಳವಾಗಿ ಸರಾಗವಾಗಿ ಸರ್ವ ವೈವಿಧ್ಯದೊಡನೆ ಕತೆಯನ್ನು ಹೇಳುವ ನಿಪುಣ ಕೌಶಲದಿಂದಾಗಿ ಒಂದೊಂದು ಕತೆಯೂ ಒಂದೊಂದು ತೆರನಾಗಿ ಮನೋರಂಜಕವಾಗಿರುವುದು ಮಾತ್ರವಲ್ಲದೆ, ಆ ಪರಿಣಾಮಕಾರಿಯಾದ ವಿಶಿಷ್ಟಾನುಭವದಲ್ಲಿ ಓದುಗ ಒಂದಾಗುವಂತೆ ಮಾಡುವುದರಲ್ಲಿ ಯಶಸ್ವಿಯಾಗಿದೆ. ಈ ವಿಪುಲವಾದ ಕಥಾವಸ್ತುವಿನಲ್ಲಿ ಚರ್ವಿತ ಚರ್ವಣವಿಲ್ಲ, ಹುಡುಕಾಟ ತಡಕಾಟವಿಲ್ಲ. ಜೀವನದ ನೂರು ಮುಖಗಳ ಸಮರ್ಪಕವಾದ ಸಮರ್ಥವಾದ ಸಾರ್ಥಕವಾದ ದರ್ಶನ ಈ ಕತೆಗಳಲ್ಲಿ ಆಗುತ್ತದೆ. ಚಂದ್ರವದನಾ' ವೇಶ್ಯೆಯೊಬ್ಬಳ ಮಾತೃಪ್ರೇಮದ ರಂಜನೀಯ ಕತೆ. ತನ್ನ ಮೋಹಕ ಲಾವಣ್ಯದಿಂದ ಮನೋಜ್ಞ

ಅಭಿನಯದಿಂದ ರಸಿಕರ ಕಣ್ಮನಗಳಿಗೆ ಹಬ್ಬವಾಗಿದ್ದ ಬೆಡಗಿನ ಭಾಮಿನಿ ಗರ್ಭವತಿಯಾಗುತ್ತಾಳೆ. ಪುತ್ರವತಿಯಾದರೆ ಅಂಗಸೌಷ್ಠವ ಹಾಳಾಗಿ, ಅದರಿಂದ ಪ್ರೇಕ್ಷಕರನ್ನು ಆಕರ್ಷಿಸದಂತಾಗಿ ಆದಾಯ ಕಡಿಮೆಯಾಗುವುದೆಂದು ಭಾವಿಸಿದ ಮಾವ ಸೂರಪ್ಪ ಅವಳು ತಾಯಾಗದಂತೆ ತಡೆಯಲು ಯತ್ನಿಸುತ್ತಾನೆ. ಆದರೆ ಈ ಸಾಮಾಜಿಕ ತೊಡಕುಗಳೆಲ್ಲವನ್ನೂ ತಾಯ್ತನ ಗೆದ್ದು ವಿಜೃಂಭಿಸುತ್ತದೆ.

ಯಾವ ತ್ಯಾಗವನ್ನಾದರೂ ಮಾಡಿ ತಾನು ಮಗುವಿನ ಮಾತೆಯಾಗಬೇಕೆನ್ನುವ ಅವಳ ಹಂಬಲ, ಅದಕ್ಕಾಗಿ ಆಕೆ ಮಾಡಿದ ಸಾಹಸ ಅತ್ಯಂತ ರೋಚಕವಾಗಿವೆ; ಗಂಭಿರ ಸ್ವರೂಪದ್ದಾಗಿದೆ. ಗೃಹಿಣಿಯಾಗಲೀ ವೇಶ್ಯೆಯಾಗಲೀ ಶ್ರೀಮಂತಳಾಗಲೀ ದರಿದ್ರಳಾಗಲೀ ಸುರೂಪಿಯಾಗಲೀ ಕುರೂಪಿಯಾಗಲೀ ಹೆಣ್ಣಿಗೆ ತಾಯಿಯಾಗುವುದು ಜೀವನದ ಒಂದು ಉನ್ನತ ಪುಣ್ಯ ಪದವಿ; ಮಹತ್ತರ ಸಾಧನೆ. ಈ ಅಕಾಂಕ್ಷೆಗೆ ಯಾವ ಬೆಲೆಯನ್ನಾದರೂ ತೆರಲು ಹೆಣ್ಣು ಸಿದ್ಧವಾಗುತ್ತದೆ ಎಂಬುದರ ರಮ್ಯ ನಿರೂಪಣೆ ಇಲ್ಲಿದೆ. ಸ್ತ್ರೀಯರ ಬಗೆಗೆ ಲೇಖಕರಿಗಿರುವ ಅನ್ಯಾದೃಶ್ಯವಾದ ಅದರ ಅನುಕಂಪಗಳು ವೇಶ್ಯೆಯಾದ ಚಂದ್ರವದನೆಯಲ್ಲಿಯೂ ಮಹತ್ವವನ್ನೇ ಗುರುತಿಸುತ್ತದೆ. ಮಾಸ್ತಿಯವರ ಬಹುಪಾಲು ಕತೆಗಳಲ್ಲಿ ಸ್ಥಾಯಿಯಾಗಿ ಕಾಣುವ ಇನ್ನೊಂದು ಅಂಶ ಮಾನವೀಯ ಅನುಕಂಪದ ಗುಣಗಳು ಇವೆ.

ಜನಜೀವನದ ನೈಜವಾದ ನಿಕಟವಾದ ಅರಿವು, ವಿಶಾಲವೂ ಗಾಢವೂ ಅಂತಃಕರಣಪೂರ್ವಕವೂ ಆದ ಲೋಕಾನುಭವ, ಸೂಕ್ಷ್ಮನಿರೀಕ್ಷಣಾ ಸಾಮರ್ಥ್ಯ, ಸರಳಸುಂದರವೂ ಸುಕುಮಾರವೂ ಸತ್ವಸಂಪನ್ನವೂ ಆದ ಅಭಿವ್ಯಕ್ತಿ, ಆದರ್ಶ ಅಭಿರುಚಿ, ಸ್ವಸ್ಥಚಿತ್ತ, ಶಿವಪರವಾದ ಜೀವನ ಮೌಲ್ಯದಲ್ಲಿ ಅಸಕ್ತಿ, ಕನ್ನಡ ಸಂಸ್ಕೃತಿಯ ಅದಮ್ಯ ಅಭಿಮಾನ ಮೂಡಿದೆ. ಮಸುಮತ್ತಿ ವರ್ಣಿಸುವ ಭಾಗದಲ್ಲಿ, ಭಾವನೆ ಸೃಷ್ಟಿಯಾದ ಒಂದು ಸಾಮಾಜಿಕ ಮತ್ತು ಮೌಲ್ಯದ ಚೌಕಟ್ಟಿನಿಂದ ಹುಟ್ಟುತ್ತದೆ. ಆದರೆ ಎಮಿಲಿಯ ಉದಾತ್ತತೆಗೆ ದೇಹ ಕೊಡಬಲ್ಲ, ಕತೆಯಲ್ಲಿ ಸೃಷ್ಟಿಯಾದ, ಸಾಮಾಜಿಕ ಮತ್ತು ಮೌಲ್ಯದ ಚೌಕಟ್ಟಿಲ್ಲ. ಅಂದರೆ ಮುದುಕನಿಗೂ ಅವನು ಹುಟ್ಟಿ ಬೆಳೆದ ಸಮಾಜಕ್ಕೂ ಇರುವ ಸಂಬಂಧ ಎಮಿಲಿಗೂ ಆಕೆ ಹುಟ್ಟಿ ಬೆಳೆದ ಸಮಾಜಕ್ಕೂ ಇಲ್ಲ. ಅದರಿಂದ ಎಮಿಲಿ ಕೆಲವು ಉದಾತ್ತ ಭಾವನೆಗಳ ಮೂರ್ತಿಕರಣವಾಗುವುದಿಲ್ಲ. ಇದೇ ಕತೆಯಲ್ಲಿ ಮುದುಕನಿಗೂ ಎಮಿಲಿಗೂ ಇರುವ ಮುಖ್ಯ ವ್ಯತ್ಯಾಸ. ಈ ವ್ಯತ್ಯಾಸದಿಂದಲೋ ಏನೋ, ಇದೇ ರೀತಿ "ಜೊಗ್ಯೋರ ಅಂಜಪ್ಪನ ಕೋಳಿಕತೆ" ಕೂಡ ಓದುಗನ ಲಕ್ಷ್ಯವನ್ನು ಅನ್ಯಾಯಕ್ಕಿಂತ ಸನ್ನಿವೇಶದ ಜಟಿಲತೆಯ ಮೇಲೆ ಕೇಂದ್ರೀಕರಿಸುವದರಿಂದಾಗಿ ಸಫಲವಾಗುತ್ತದೆ. ವಿನಾಕಾರಣ ಜುಲ್ಮಾನೆ ತೆತ್ತ ಅಂಜಪ್ಪನ ಕತೆ ನ್ಯಾಯ ವಿತರಣೆಯ ಬಗ್ಗೆ ತಾತ್ವಿಕ ಪ್ರಶೆಗಳಿಗಿಂತ ಅನ್ಯಾಯಕ್ಕಿಂತ, ಜೀವನದ ಅನುಭವ ಅಂಜಪ್ಪನಿಗೆ ತಂದುಕೊಡುವ ವಿವೇಕವನ್ನು ಹೇಳುತ್ತದೆ. ಮುಖ್ಯವಾಗಿ ಮಾಸ್ತಿಯವರ ಸಂವೇದನಾಶೀಲ ಬಹುಶಃ ಅರಗಿಸಿಕೊಳ್ಳಲಾರದ ತಾತ್ವಿಕವಾದ ತಾತ್ವಿಕ ಹಲವು ಪ್ರಶ್ನೆಗಳು ಕಂಡು ಬರುತ್ತವೆ.

ಆಧಾರ ಗ್ರಂಥಗಳು

ಮಾಸ್ತಿ ಸಮಗ್ರ ಸಾಹಿತ್ಯ ಅವಲೋಕನ ಸಂಪುಟ: 1 : (ಸಂ) ಮಾವಿನಕೆರೆ ರಂಗನಾಥನ್

ಕನ್ನಡದ ಅತ್ಯುತ್ತಮ ಸಣ್ಣ ಕಥೆಗಳು : ಸದಾಶಿವ

ಮಾಸ್ತಿ ವೆಂಕಟೇಶ ಅಯದಯಂಗಾರ್ : ಜಿ.ಎಸ್.ಸಿದ್ದಲಿಂಗಯ್ಯ

ಕನ್ನಡ ಕಥಾ ಸಾಹಿತ್ಯ ಪರಿಚಯ : ಕೆಎಸ್ಓಯೂ ಪತ್ಯ – ಮೈಸೂರು